# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣಾ ಮತ್ತು ಸರಹದ್ದುಗಳ ನಿರ್ಧರಣಾ ಸಮಿತಿಯ ವರದಿ ಮತ್ತು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ್ವಯ ಹೊಸದಾಗಿ 6 ಗ್ರಾಮ ಪಂಚಾಯತಿಗಳನ್ನು ರಚಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 38 ಗ್ರಾಪಸ 2013, ದಿನಾಂಕ:01-03-2014.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಗ್ರಾಪಂಅ 2015,ದಿನಾಂಕ: 09-01-2015.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಗ್ರಾಪಂಅ 2015, ದಿನಾಂಕ:13-02-2015.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 29 ಗ್ರಾಪಸ 2014, ದಿನಾಂಕ:30-04-2015.

## ಪ್ರಸ್ತಾವನೆ:

1. ಸಾರ್ವಜನಿಕರಿಂದ, ಶಾಸಕರುಗಳಿಂದ, ಸ್ಥಳೀಯ ಸಂಸ್ಥೆಗಳ ಗ್ರಾಮೀಣ ಚುನಾಯಿತ ಸದಸ್ಯರುಗಳಿಂದ, ಸ್ವಯಂ ಸೇವಾ ಸಂಸ್ಥೆಗಳಿಂದ ಮತ್ತು ಇತರೆಯವರಿಂದ ಗ್ರಾಮ ಪಂಚಾಯತಿಗಳನ್ನು ವಿಭಜಿಸುವ ಬಗ್ಗೆ ಮತ್ತು ಪಂಚಾಯತಿಗಳ ಕೇಂದ್ರಸ್ಥಾನವನ್ನು ಬದಲಾಯಿಸುವ ಬಗ್ಗೆ ಅನೇಕ ಬೇಡಿಕೆಗಳು ಹಾಗೂ ಮನವಿಗಳು ಬಂದಿದ್ದವು. ಒಂದು ಗ್ರಾಮ ಪಂಚಾಯತಿಯಿಂದ ಮತ್ತೊಂದು ಗ್ರಾಮ ಪಂಚಾಯತಿಗೆ ಗ್ರಾಮಗಳನ್ನು ಬದಲಾಯಿಸುವ ಬಗ್ಗೆಯೂ ಬೇಡಿಕೆ ಇರುತ್ತವೆ. ಇದರ ಹಿನ್ನೆಲೆಯಲ್ಲಿ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ಶ್ರೀ ಎಸ್. ಜಿ. ನಂಜಯ್ಯನಮಠ, ಮಾಜಿ ಶಾಸಕರು ಇವರ ನೇತೃತ್ವದಲ್ಲಿ ಹಾಗೂ ಇತರೆ ತಜ್ಞರನ್ನೊಳಗೊಂಡಂತೆ ಒಂದು ಸಮಿತಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರ ಆದೇಶ ಸಂಖ್ಯೆ ಗ್ರಾಅಪ 38 ಗ್ರಾಪಸ 2013 ದಿನಾಂಕ: 01-03-2014 ರಲ್ಲಿ ರಚಿಸಲಾಗಿತ್ತು. ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣಾ ಮತ್ತು ಸರಹದ್ದುಗಳ ನಿರ್ಧರಣಾ ಸಮಿತಿಯು ಸಲ್ಲಿಸಿದ ವರದಿಯ ಶಿಫಾರಸ್ಸಿನನ್ವಯ 439 ಹೊಸ ಗ್ರಾಮ ಪಂಚಾಯತಿಗಳನ್ನು ರಚಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ: (3) ರ ಸರ್ಕಾರದ ಆದೇಶದಲ್ಲಿ 15 ಹೊಸ ಗ್ರಾಮ ಪಂಚಾಯತಿಗಳನ್ನು ರಚಿಸಲು ಮತ್ತು ಕೆಲವು ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನ ಬದಲಾವಣೆ ಮಾಡಲು ಹಾಗೂ ಕೆಲವು ಗ್ರಾಮಗಳನ್ನು ಬೇರೊಂದು ಗ್ರಾಮ ಪಂಚಾಯತಿಗೆ ವರ್ಗಾವಣೆ ಮಾಡಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಮತ್ತು ಮೇಲೆ ಓದಲಾದ ಕ್ರಮ ಸಂಖ್ಯೆ: (4) ರ ಸರ್ಕಾರದ ಆದೇಶದಲ್ಲಿ 7 ಹೊಸ ಗ್ರಾಮ ಪಂಚಾಯತಿಗಳನ್ನು ರಚಿಸಲು ಮತ್ತು ಕೆಲವು ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನ ಬದಲಾವಣೆ ಮಾಡಲು ಹಾಗೂ ಕೆಲವು ಗ್ರಾಮಗಳನ್ನು ಬೇರೊಂದು ಗ್ರಾಮ ಪಂಚಾಯತಿಗೆ ವರ್ಗಾವಣೆ ಮಾಡಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

2. ಆದರೆ, ಕೆಲವು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಕಾರಣಾಂತರಗಳಿಂದ ಕೆಲವು ಗ್ರಾಮ ಪಂಚಾಯತಿಗಳ ರಚನೆ / ಪುನರ್ ವಿಂಗಡಣೆ ಸೂಕ್ತವಲ್ಲವೆಂದು ಅಭಿಪ್ರಾಯಿಸಿ, ಗ್ರಾಮ ಪಂಚಾಯತಿಗಳ ರಚನೆಯ ಅಧಿಸೂಚನೆ ಹೊರಡಿಸಿರುವುದಿಲ್ಲ. ಮುಂದುವರೆದು, ಕೆಲವು ಜಿಲ್ಲಾಧಿಕಾರಿಗಳು ಹೆಚ್ಚುವರಿಯಾಗಿ ತಮ್ಮ ಜಿಲ್ಲೆಗಳಲ್ಲಿ ಅಂದರೆ ಚಿಕ್ಕಬಳ್ಳಾಪುರ ಜಿಲ್ಲೆಯ ಪೋಲುನಾಯಕನಪಲ್ಲಿ, ಬಾಗಲಕೋಟೆ ಜಿಲ್ಲೆಯ ಚಿಕ್ಕಮ್ಮಗೇರಿ, ಬೇವಿನ ಮಟ್ಟಿ, ಹೆಗ್ಗೂರು, ಹೊಸಕೋಟಿ, ಕಂಪನಿನಿಂಬರ್ಗಿ, ಉಡುಪಿ ಜಿಲ್ಲೆಯ ಆರೂರು ಮತ್ತು ಗದಗ ಜಿಲ್ಲೆಯ ಶಿವಾಜಿನಗರ ಗ್ರಾಮ ಪಂಚಾಯತಿಗಳನ್ನು ಸೃಜಿಸಿ, ನಿಯಮಾನುಸಾರ ಅಧಿಸೂಚನೆ ಹೊರಡಿಸಿರುತ್ತಾರೆ. ಜಿಲ್ಲಾಧಿಕಾರಿಗಳು ರಚಿಸಿರುವ ಈ 8 ಹೊಸ ಗ್ರಾಮ ಪಂಚಾಯತಿಗಳ ರಚನೆಯು ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಸರ್ಕಾರದ ಆದೇಶದಲ್ಲಿ ರಚಿಸಿರುವ 439 ಗ್ರಾಮ ಪಂಚಾಯತಿಗಳ ಸಂಖ್ಯೆಯ ಮಿತಿಯೊಳಗೆ ಬರುತ್ತವೆ. ಇವುಗಳಲ್ಲದೆ, ಪ್ರಾದೇಶಿಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಬೆಳಗಾವಿ ಜಿಲ್ಲೆಯ ಕೆಂಪಟ್ಟಿ, ಶಿರಡಾಣ, ಓಬಳಾಪುರ ಮತ್ತು ಧಾರವಾಡ ಜಿಲ್ಲೆಯ ಪಶುಪತಿಹಾಳ ಗ್ರಾಮ ಪಂಚಾಯತಿಗಳನ್ನು ಸೃಜಿಸಲು ಸರ್ಕಾರ ನಿರ್ಧರಿಸಿದೆ.

3. ನಗರಾಭಿವೃದ್ಧಿ ಇಲಾಖೆಯು 64 ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿ, ಪುರಸಭೆ ಮತ್ತು ನಗರಸಭೆಗಳನ್ನಾಗಿ ಉನ್ನತೀಕರಿಸಲು ಕ್ರಮ ವಹಿಸುತ್ತಿರುವುದರಿಂದ, ಈ ಗ್ರಾಮ ಪಂಚಾಯತಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಈ ಗ್ರಾಮ ಪಂಚಾಯತಿಗಳಿಗೆ ಮಂಜೂರಾಗಿರುವ ಹುದ್ದೆಗಳನ್ನು ಹೊಸದಾಗಿ ರಚನೆಯಾಗುವ ಗ್ರಾಮ ಪಂಚಾಯತಿಗಳಿಗೆ ಹಾಗೂ ಇನ್ನಿತರೆ ಗ್ರಾಮ ಪಂಚಾಯತಿಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ಹೊಸ ಗ್ರಾಮ ಪಂಚಾಯತಿಗಳ ಕಛೇರಿಗಳಿಗೆ ಕಟ್ಟಡ ನಿರ್ಮಾಣ, ಪಿಠೋಪಕರಣಗಳು, ಶಾಸನಬದ್ಧ ಅನುದಾನ ಒದಗಿಸಲು, ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 73 ಗ್ರಾಪಂಅ 2015, ಬೆಂಗಳೂರು, ದಿನಾಂಕ: 10-08-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 4(1) ಮತ್ತು 4(2) ರಂತೆ ಜಿಲ್ಲಾಧಿಕಾರಿಗಳು 6 ಗ್ರಾಮ ಪಂಚಾಯತಿಗಳನ್ನು ಹೊಸದಾಗಿ ಅನುಬಂಧ-ಅ ರಲ್ಲಿರುವಂತೆ ರಚಿಸಲು

(2) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 4(1) ಮತ್ತು 4(2) ರಂತೆ ಜಿಲ್ಲಾಧಿಕಾರಿಗಳು ಅನುಬಂಧ-ಆ ನಲ್ಲಿರುವಂತೆ ಈಗಾಗಲೇ ಹೆಚ್ಚುವರಿಯಾಗಿ ರಚಿಸಿರುವ ಗ್ರಾಮ ಪಂಚಾಯತಿಗಳ ಸೃಜನೆಗೆ ಘಟೋನ್ನತ್ತರ ಮಂಜೂರಾತಿ ನೀಡಲು ಅನುಮೋದನೆ ನೀಡಿದೆ.

ಗ್ರೇಡ್-1 ಮತ್ತು ಗ್ರೇಡ್-2 ಗ್ರಾಮ ಪಂಚಾಯತಿಗಳ ವಿವರ, ಗ್ರಾಮ ಪಂಚಾಯತಿವಾರು ಮಂಜೂರಾದ ಹುದ್ದೆಗಳ ವಿವರ, ಗ್ರಾಮ ಪಂಚಾಯತಿ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಅನುದಾನದ ವಿವರ, ಶಾಸನಬದ್ಧ ಅನುದಾನ, ಪೀಠೋಪಕರಣಗಳು ಮತ್ತು ಗಣಕಯಂತ್ರ ಮತ್ತು ಸಂಬಂಧಿ ಸಾಧನಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

C. Balar

(ಸಿ.ಬಲರಾಮ್)
ಪೀಠಾಧಿಕಾರಿ (ಗ್ರಾಮ ಪಂಚಾಯತ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ – ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, 1000 ಪ್ರತಿಗಳನ್ನು ಉಪನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಒದಗಿಸಲು ಕೋರಿದೆ.

ಪ್ರತಿಗಳು:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರುಗಳು, ಬೆಳಗಾವಿ.
3. ಜಿಲ್ಲಾಧಿಕಾರಿಗಳು, ಗದಗ, ಉತ್ತರ ಕನ್ನಡ, ಧಾರವಾಡ, ಮತ್ತು ಬೆಳಗಾಂ,
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಗದಗ, ಉತ್ತರ ಕನ್ನಡ, ಧಾರವಾಡ, ಮತ್ತು ಬೆಳಗಾಂ,
5. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು.
6. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
7. ಸಂಬಂಧಪಟ್ಟ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಂಬಂಧಪಟ್ಟ ಗ್ರಾಮ ಪಂಚಾಯತಿಗಳು (ಸಂಬಂಧಿಸಿದ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ).
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-6)/ ಯೋಜನಾ ಇಲಾಖೆ.
9. ಸಂಪಾದಕರು, ಕರ್ನಾಟಕ ವಿಕಾಸ / ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
10. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

## ಅನುಬಂಧ – ಆ

### ಜಿಲ್ಲಾಧಿಕಾರಿಗಳು ಹೆಚ್ಚುವರಿಯಾಗಿ ಸೃಜಿಸಿರುವ ಗ್ರಾಮ ಪಂಚಾಯತಿಗಳು

| ಕ್ರ.ಸಂ. | ಜಿಲ್ಲೆ | ಗ್ರಾಮ ಪಂಚಾಯತಿಗಳು |
|---|---|---|
| 1 | ಚಿಕ್ಕಬಳ್ಳಾಪುರ | ಪೋಲುನಾಯಕನಪಲ್ಲಿ |
| 2 | ಬಾಗಲಕೋಟೆ | ಚಿಕ್ಕಮ್ಯಾಗೇರಿ, |
| 3 | ಬಾಗಲಕೋಟೆ | ಬೇವಿನಮಟ್ಟಿ |
| 4 | ಬಾಗಲಕೋಟೆ | ಹೆಗ್ಗೂರು |
| 5 | ಬಾಗಲಕೋಟೆ | ಹೊಸಕೋರ್ತಿ |
| 6 | ಬಾಗಲಕೋಟೆ | ಕಂಪನಿಂಬರ್ಗಿ |
| 7 | ಉಡುಪಿ | ಆರೂರು |
| 8 | ಗದಗ | ಶಿವಾಜಿನಗರ |

C. Balaram (signature)

(ಸಿ.ಬಲರಾಮ್)
ಪೀಠಾಧಿಕಾರಿ (ಗ್ರಾಮ ಪಂಚಾಯತ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಗ್ರಾಪಂಅ 2015 ದಿನಾಂಕ:10-08-2015 ಕ್ಕೆ

ಅನುಬಂಧ – ಅ

ನೂತನ ಗ್ರಾಮ ಪಂಚಾಯಿತಿಗಳ ಪಟ್ಟಿ:

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಹೊಸದಾಗಿ ರಚಿಸಬೇಕಾದ ಗ್ರಾಮ ಪಂಚಾಯತಿ | ಗ್ರಾಮಗಳು |
|---|---|---|---|---|
| 1 | ಗದಗ | ರೋಣ | ಜಂತ್ಲಿ ಶಿರೂರ * | ಜಂತ್ಲಿ ಶಿರೂರ |
| 2 | ಉತ್ತರ ಕನ್ನಡ | ಜೋಯಿಡಾ | ಗಾಂಗೋಡಾ * | ಗಾಂಗೋಡಾ |
| 3 | ಬೆಳಗಾವಿ | ರಾಯಭಾಗ | ಕೆಂಪಟ್ಟಿ | ಕೆಂಪಟ್ಟಿ |
| 4 | ಬೆಳಗಾವಿ | ಹುಕ್ಕೇರಿ | ಶಿರಡಾಣ | 1 ಶಿರಡಾಣ<br>2 ಝುಂಗಟಿಹಾಳ |
| 5 | ಬೆಳಗಾವಿ | ರಾಮದುರ್ಗ | ಓಬಳಾಪುರ | 1 ಓಬಳಾಪುರ<br>2 ಸೊಪ್ಪಡ್ಲಾ<br>3 ವೆಂಕಟೇಶ್ವರ ನಗರ |
| 6 | ಧಾರವಾಡ | ಕುಂದಗೋಳ | ಪಶುಪತಿಹಾಳ | ಪಶುಪತಿಹಾಳ |

* ಜಂತ್ಲಿ ಶಿರೂರ ಮತ್ತು ಗಾಂಗೋಡಾ ಗ್ರಾಮ ಪಂಚಾಯತಿಗಳನ್ನು ಸೃಜಿಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 29 ಗ್ರಾಪಸ 2014 ದಿನಾಂಕ: 30-04-2015 ರಲ್ಲಿ ಈಗಾಗಲೇ ಆದೇಶಿಸಲಾಗಿದೆ. ಇವುಗಳ ಸಂಬಂಧ ಜಿಲ್ಲಾಧಿಕಾರಿಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 4 ರಡಿ ಅಧಿಸೂಚನೆ ಹೊರಡಿಸುವಂತೆ ಆದೇಶಿಸಿದೆ.

(ಸಿ.ಬಲರಾಮ್)
ಪೀಠಾಧಿಕಾರಿ (ಗ್ರಾಮ ಪಂಚಾಯತ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.